ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಡಾ: ತೇಜಸ್ವಿನಿ ಗೌಡ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 784

ಉತ್ತರಿಸಬೇಕಾದ ದಿನಾಂಕ : 15.12.2020

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಂಗಳೂರಿನ ಬಸವನಗುಡಿಯಲ್ಲಿರುವ ಶ್ರೀ ರಾಘವೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸುಮಾರು 450 ಕೋಟಿ ಮೌಲ್ಯದ ಬೃಹತ್ ಅವ್ಯಹಾರ ನಡೆದಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಹೌದು.</td></tr>
<tr><td>ಆ.</td><td>ಬೃಹತ್ ಅವ್ಯವಹಾರದಲ್ಲಿ ತೊಂದರೆಗೀಡಾಗಿರುವ ಠೇವಣಿದಾರರ ಸಂಖ್ಯೆ ಎಷ್ಟು ಹಾಗೂ ಪರಿಸ್ಥಿತಿಯನ್ನು ವಿವರಿಸುವುದು;</td><td>ಈ ಅವ್ಯವಹಾರದಿಂದ 40,661 ಠೇವಣಿದಾರರು ತೊಂದರೆಗೀಡಾಗಿರುತ್ತಾರೆ. ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ:02-01-2020 ರಂದು ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ 1949 ರ ಪ್ರಕರಣ 35 ರಡಿ ನಿರ್ದೇಶನ ನೀಡಿ ಪ್ರತಿ ಖಾತೆದಾರರಿಗೆ ಗರಿಷ್ಟ ರೂ: 35,000 ಪಾವತಿಸಲು ಆದೇಶಿಸಿತ್ತು. ಅದನ್ನು ಪರಿಷ್ಕರಿಸಿ ದಿನಾಂಕ:30-01-2020 ರಲ್ಲಿ ರೂ.1.00 ಲಕ್ಷಕ್ಕೆ ಹೆಚ್ಚಿಸಿರುತ್ತದೆ. ದಿನಾಂಕ:15-04-2020ರ ಆದೇಶದಲ್ಲಿ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆ ಇದ್ದಲ್ಲಿ ಈ ಮಿತಿಯನ್ನು ಐದು ಲಕ್ಷಗಳಿಗೆ ಹೆಚ್ಚಿಸಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನದ ಪ್ರಕಾರ ದಿನಾಂಕ: 10-01-2020 ರಿಂದ ಇದುವರೆವಿಗೂ 18,512 ವಿವಿಧ ಠೇವಣಾತಿದಾರರಿಗೆ ರೂ: 159.69 ಕೋಟಿ ಠೇವಣಾತಿ ಹಣವನ್ನು ಮರುಪಾವತಿಸಲಾಗಿದೆ. ಇನ್ನೂ 40,557 ಠೇವಣಾತಿದಾರರಿಗೆ ಒಟ್ಟಾರೆ ರೂ.2317.28 ಕೋಟಿ ಮೊತ್ತವನ್ನು ಬ್ಯಾಂಕ್ ಮರುಪಾವತಿಸಬೇಕಾಗಿದೆ.</td></tr>
<tr><td>ಇ.</td><td>ಅವ್ಯವಹಾರದ ಸಂಪೂರ್ಣ ತನಿಖೆಗೆ ಯಾವ ಕ್ರಮ ವಹಿಸಲಾಗಿದೆ: ಯಾವ ತನಿಖಾ ಸಂಸ್ಥೆ ತನಿಖೆ ಕೈಗೊಂಡಿದೆ: ಇದರ ಫಲಿತಾಂಶವೇನು:</td><td>ಅವ್ಯವಹಾರದ ಬಗ್ಗೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<table>
<tr><td>I. 2014-15 ರಿಂದ 2018-19ನೇ ಸಾಲಿನವರೆಗೆ ಮರುಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ ಹಾಗೂ ವಿಧಿ ವಿಜ್ಞಾನ ಲೆಕ್ಕಪರಿಶೋಧನೆಗೆ (Forensic Audit) ಆದೇಶಿಸಲಾಗಿದೆ.</td><td>ಲೆಕ್ಕಪರಿಶೋಧನೆ ಕಾರ್ಯ ಪ್ರಗತಿಯಲ್ಲಿದೆ</td></tr>
<tr><td>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರಡಿ ವಿಚಾರಣೆಗೆ ಆದೇಶಿಸಲಾಗಿದೆ.</td><td>ವಿಚಾರಣೆ ನಡೆಯುತ್ತಿದೆ.</td></tr>
<tr><td>ಸಿಐಡಿ ತನಿಖೆ ನಡೆಯುತ್ತಿದೆ</td><td>ಸಿಐಡಿ ತನಿಖೆ ನಡೆಯುತ್ತಿದೆ.</td></tr>
<tr><td>ಸಂಬಂಧಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.</td><td></td></tr>
</table></td></tr>
</table>

ಈ.	ಠೇವಣಿದಾರರಿಗೆ ಎಷ್ಟು ಕಾಲಮಿತಿಯೊಳಗೆ ಹಣ ಹಿಂತಿರುಗಿಸಲು ಕ್ರಮವಹಿಸಲಾಗಿದೆ? (ಅವ್ಯವಹಾರ ಆರೋಪಿಗಳ ವಿವರ ಹಾಗೂ ಅವ್ಯವಹಾರದ ಸ್ವರೂಪದ ಬಗೆಗಿನ ಪೂರ್ಣ ಮಾಹಿತಿ ಒದಗಿಸುವುದು)	ಭಾರತೀಯ ರಿಸರ್ವ್ ಬ್ಯಾಂಕಿನ ಸಲಹೆ ಮೇರೆಗೆ ದಿನಾಂಕ:18.05.2020 ರಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 30(6)ರಡಿಯಲ್ಲಿ ಆಡಳಿತಾಧಿಕಾರಿಯನ್ನಾಗಿ ಇಲಾಖಾಧಿಕಾರಿಯನ್ನು ಒಂದು ವರ್ಷದ ಅವಧಿಗೆ ನೇಮಿಸಲಾಗಿತ್ತು. ಸದರಿ ಆಡಳಿತಾಧಿಕಾರಿ ಪ್ರಭಾರ ವಹಿಸಿಕೊಂಡು ಬ್ಯಾಂಕಿನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನ ಹಾಗೂ ಆರ್.ಬಿ.ಐ. ಸಲಹೆಯ ಪ್ರಕಾರ ನಿವೃತ್ತ ಕೆನರಾ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರು ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಶ್ರೀ ಆರ್. ಅಶೋಕನ್ ರವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ. ಅವರು ದಿನಾಂಕ:10.11.2020 ರಂದು ಪ್ರಭಾರ ವಹಿಸಿಕೊಂಡಿರುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 7350/2020 ರಲ್ಲಿ ಕಾಲಕಾಲಕ್ಕೆ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗುತ್ತಿದೆ. ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನ, ಆರ್.ಬಿ.ಐ.ನ ಸಲಹೆಯಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನುರಿತ ಹಾಗೂ ತಜ್ಞತೆ ಹೊಂದಿರುವ ಕೆನರಾ ಬ್ಯಾಂಕಿನ ನಿವೃತ್ತ ಪ್ರಧಾನ ವ್ಯವಸ್ಥಾಪಕರನ್ನು ಬ್ಯಾಂಕಿನ ಆಡಳಿತಾಧಿಕಾರಿಯಾಗಿ ದಿನಾಂಕ:10.11.2020 ರಂದು ನೇಮಿಸಿದ್ದು ವಸೂಲಾತಿಗೆ ಕ್ರಮ ಕೈಗೊಂಡು ಬ್ಯಾಂಕು ಪುನಶ್ಚೇತನ ಕಾರ್ಯಕ್ರಮ ರೂಪಿಸಿ ಕಾಲಬದ್ಧವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ. <u>ಅವ್ಯವಹಾರದ ಸ್ವರೂಪ</u>: ಮರು ಲೆಕ್ಕಪರಿಶೋಧನೆ, 64ರ ವಿಚಾರಣೆ ಪೂರ್ಣಗೊಂಡ ನಂತರ ಸ್ಪಷ್ಟವಾಗುತ್ತದೆ. ಆದರೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಶಾಸನಾತ್ಮಕ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಹಣಕಾಸಿನ ಅವ್ಯವಹಾರಗಳು ಕಂಡುಬಂದಿದ್ದು ಭಾರತೀಯ ರಿಸರ್ವ್ ಬ್ಯಾಂಕ್ ಗಮನಿಸಿರುವ ಅವ್ಯವಹಾರಗಳು ಕೆಳಕಂಡಂತಿದೆ. 1. ಕೃತಕ ಮತ್ತು ಕೃತ್ರಿಮ ಠೇವಣಾತಿಗಳನ್ನು ಸೃಷ್ಟಿಸಿರುವುದು. 2. KYC ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿರುವುದು. 3. ರೂ: 593 ಲಕ್ಷ ಬಡ್ಡಿಯನ್ನು ಲಾಭ ನಷ್ಟ ತಖ್ತೆಗೆ ತಪ್ಪಾಗಿ ಜಮೆ ಮಾಡಿರುವುದು. 4. 14933.22 ಲಕ್ಷ ಹಣವನ್ನು 60 ಕೃತ್ರಿಮ ಗ್ರಾಹಕರನ್ನು ಸೃಷ್ಟಿಸಿರುವುದು 5. 1274 ಸಾಲ ಪ್ರಕರಣಗಳಲ್ಲಿ ದಾಖಲೆಗಳಿಲ್ಲದಿರುವುದು. 6. ಕೃತಕ ಖಾತೆ ಸೃಷ್ಟಿಸಿ ಅಡಮಾನ ಸಾಲ, ಠೇವಣಾತಿ ಸಾಲ, ಮೀರಳತೆ ಸಾಲ ಎಂದು ತೋರಿಸಿರುವುದು. 7. 1602 ಸಾಲ ಖಾತೆಗಳಲ್ಲಿ ರೂ.70189.56 ಲಕ್ಷ ಯಾವುದೇ ದಾಖಲೆಗಳಿಲ್ಲದಿರುವುದು. 8. ಆದಾಯ ಗುರುತಿಸುವಿಕೆ-ಆಸ್ತಿ ವರ್ಗೀಕರಣ (IRAC-NORMS) ನಿಯಮಾವಳಿಗಳನ್ನು ಪಾಲಿಸದೇ ಕಾನೂನು ಉಲ್ಲಂಘನೆ ಮಾಡಿರುವುದು.

		9. ರೂ.154443.84 ಲಕ್ಷದ ಮೊತ್ತದ ಸಾಲ 2876 ಸಾಲ ಪ್ರಕರಣಗಳಲ್ಲಿ ಯಾವುದೇ ಕಡತಗಳು ಹೊಂದಿಲ್ಲದಿರುವುದು. 10. ರೂ.89285.26 ಲಕ್ಷಗಳನ್ನು 24 ಫಲಾನುಭವಿಗಳಿಗೆ ನೀಡಿ ಹಣದುರುಪಯೋಗವಾಗಿರುವುದು. 11. ಬಹುತೇಕ ಸಾಲಗಳು ಸಾಲದ ಉಪಸಮಿತಿ ಅಥವಾ ಆಡಳಿತ ಮಂಡಳಿಯಲ್ಲಿ ಚರ್ಚೆಯಾಗದೇ ಮಂಜೂರು ಮಾಡಿರುವುದು.

ಸಂಖ್ಯೆ: ಸಿಓ 116 ಸಿಸಿಬಿ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು